ದಿನಾಂಕ **28-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಿಂದ

4. ಸುಶೀಲಾ ರವರ ಮಗ ರಾಮ ಮರಣ ಹೊಂದಿರುತ್ತಾನೆ. ರಾಮ ರವರಗೆ ಸರಳ ವಾರಸುದಾರರು ಯಾರು ಇರುವುದಿಲ್ಲ. ರಾಮ ರವರ ಮರಣ ನಂತರ ಸುಶೀಲಾ , 1 ನೇ ಪ್ರತಿವಾದಿ ಮತ್ತು ಲಕ್ಷಣ ರವರು ರಾಮ ರವರ ವಾರಸುದಾರರ ಎಂದರೆ ಸರಿ . 1978-79 ರಲ್ಲಿ ನನ್ನ ತಂದೆಯ ಮದುವೆ ಆಗಿತ್ತು. ನನ್ನ ತಂದೆದ್ದು ಹಿರೆಕುಡಿ ಊರಿನವರು. ಆ ಬಗ್ಗೆ ದಾಖಲೆಗಳು ಇವೆ. ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ತಂದೆಯ ರೇಷನ ಕಾರ್ಡನಲ್ಲಿ ಮತ್ತು ಅಧಾರ ಕಾರ್ಡನಲ್ಲಿ ಅವರ ವಾಸ ಜುಗಳಿ ಗ್ರಾಮದಲ್ಲಿ ಎಂದು ನಮೂದು ಆಗಿರುತ್ತದೆ ಎಂದರೆ ಸರಿ . ಅವರು ಅಲ್ಲಿಗೆ ದುಡಿಯಲು ಹೋಗಿದ್ದರು. ನನ್ನ ತಾಯಿ ಕೂಡ ಅವರ ಜೊತೆ ಕೆಲಸ ಮಾಡಲು ಜುಗಳಿ ಹೋಗಿದ್ದರು ಎಂದರೆ ಸರಿ . ದಾವಾ ನಂಬರ 113/08 ರ ನೋಟಿಸ ನನ್ನ ತಂದೆಗೆ ಮತ್ತು ತಾಯಿಗೆ ಜುಗಳಿಯ ವಿಳಾಸದಲ್ಲಿ ಬಂದಿತ್ತು ಎಂದರೆ ಸರಿ . ಈ ದಾವೆಯಲ್ಲಿ ಕೂಡ ನನ್ನ ತಂದೆ ಹಾಗೂ ತಾಯಿ ನೋಟಿಸ ಜುಗಳಿ ವಿಳಾಸದಲ್ಲಿ ಬಂದಿದ್ದೆ ಎಂದರೆ ಸರಿ . ನನ್ನ ತಂದೆ ಯ ಮರಣ ನಂತರ ಅರ್ಜಿಗಳ ನೋಟಿಸ ಕೂಡ ಜುಗಳಿ ವಿಳಾಸದಲ್ಲಿ ಬಂದಿದ್ದೆ ಎಂದರೆ ಸರಿ .

5. ನಾನು ಕಾಯಂ ಹಿರೆಕುಡಿಯಲ್ಲಿ ವಾಸ ವಾಗಿದ್ದೇನೆ ಎಂದು ತೋರಿಸಲು ನಾನು ಯಾವ ದಾಖಲೆಯನ್ನು ಹಾಜರು ಪಡಿಸಿಲ್ಲ. ವಾದಿ ಗೆ ತೊಂದಗೆ ಕೂಡಲು ನಾನು ಹಿರೆಕುಡಿಯಲ್ವಿ ವಾಸ ಮಾಡುತಿದ್ದೇನೆ ಎಂದು ಸುಳ್ಳು ನುಡಿಯುುತಿದ್ದೇನೆ ಎಂದರೆ ಸರಿಯಲ್ಲ . ದಾವಾ ನಂಬರ 113/08 ರಲ್ಲಿ ನನ್ನ ತಂದೆ ತಾಯಿ ಏನು ತಕರಾರು ಹಾಕಿದ್ದರು ಎಂದರೆ ನನಗೆ ಮಾಹಿತಿ ಇದೆ. ಲಕ್ಷಣ ಮತ್ತು ನನ್ನ ತಂದೆಗೆ ಸಂಬಂದ 2008 ಮೊದಲು ಚೆನ್ನಾಗಿ ಇತ್ತು ಎಂದರೆ ಸರಿ . ದಿಃ 29-10-2003 ರಂದು ಲಕ್ಷಣ ರವರು ನನ್ನ ತಂದೆಗೆ ಆರ್ ಎಸ ನಂಬರ 265/2 ರ 26 ಗುಂಟೆ 8 ಆಣೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ನನ್ನ ಅಜ್ಜಿ ಸುಶೀಲಾ ರವರ ಸಹಿ ಇಲ್ಲ ಎಂದರೆ ಸರಿ . ಲಕ್ಷಣ ಮತ್ತು ನನ್ನ ತಂದೆಗೆ ನಡುವೆ ಒಂದು ಹಣದ ವ್ಯವಹಾರ ಆಗಿತ್ತು ಎಂದರೆ ಸಾಕ್ಷಿ ಕರಾರು ಪತ್ರ ವ್ಯವಹಾರ ಆಗಿತ್ತು ಎಂದು ನುಡಿಯುತ್ತಾರೆ. ಆ ಬಗ್ಗೆ ನನ್ನ ತಂದೆ ಸಲ್ಲಿಸಿದ್ದ ದಾವ ನಂಬರ 135/08 ರ ಬಗ್ಗೆ ನನ್ನ ಪ್ರತಿವಾದಿ ಪತ್ರದಲ್ಲಿ ಹೇಳಿದ್ದೇನೆ. ಸದರಿ ದಾವೆಯಲ್ಲಿ ನನ್ನ ಅಜ್ಜಿ ಸುಶೀಲಾ ಪಕ್ಷಗಾರರಾಗಿ ಇರಲಿಲ್ಲ. ಇ ಪಿ ನಂಬರ 74/2011 ರಲ್ಲಿ ಮೃತ ಸುಶೀಲಾ ಪಕ್ಷಗಾರರಾಗಿ ಇರಲಿಲ್ಲ. ಶೇಖರ ಶಿವಪ್ಪ ಕಟ್ಟಿ , ಅಣ್ಣಸಾಬ ಸದಾಶೀವ ಭಜಂತ್ರಿ ಮತ್ತು ರಾಜೇಂದ್ರ ಸೈಬನ್ನವರ ಹಾಗೂ ನಮ್ಮ ನಡುವೆ ಪೋಲಿಸರ ಠಾಣೆಯಲ್ಲಿ ಯಾವುದೆ ಪ್ರಕರಣ ಹಾಗೂ ನ್ಯಾಯಲಯದಲ್ಲಿ ಯಾವುದೇ ಪ್ರಕರಣ ಇರುವುದಿಲ್ಲ.

6. ನನಗೆ ಈ ಒಂದು ದಾಖಲೆ ತೋರಿಸುತ್ತಿದ್ದು ಅದು ರಾಜೇಂದ್ರ ಅಪ್ಪಾಸಾಬ ಸೈಬನ್ನವರ ರವರ ಮರಣ ಪ್ರಮಾಣ ಪತ್ರದ ದೃಡಿಕೃತ ನಕಲು ಎಂದರೆ ಸರಿ . ಸಾಕ್ಷಿ ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸುಶೀಲಾ, ತಾರಾಬಾಯಿ ಮತ್ತು ಲಕ್ಷಣ ರವರ ಸಂಬಂದ ಚೆನ್ನಾಗಿ ಇರಲಿಲ್ಲ ಹಾಗೂ ದಾವೆ ನಂಬರ 113/2008 ಸಲ್ಲಿಸಿದ ನಂತರ ಸಂಬಂದ ಮತಷ್ಟ ಹಾಳಾಗಿತ್ತು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನನ್ನ ಅಜ್ಜಿ ಒಬ್ಬರೆ ಹಿರೆಕುಡಯಲ್ಲಿ ವಾಸವಾಗಿದ್ದರು ಎಂದರೇ ಸರಿಯಲ್ಲ. ಎಫ ಡಿ ಪಿ ಪ್ರಕರಣದಲ್ಲಿ ನಮ್ಮ ಹಾಗೂ ನಮ್ಮ ಅಜ್ಜಿ ಸಂಬಂದ ಚೆನ್ನಾಗಿ ಇದೆ ಎಂದು ಹೇಳಿಕೆ ನೀಡಿಲಾಗಿದೆಯೂ ಇಲ್ಲವೂ ಗೊತ್ತಿಲ್ಲ. ಅದರ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ನಮ್ಮ ಸಂಬಂದ ಚೆನ್ನಾಗಿ ಇಲ್ಲದ ಕಾರಣ ನಾನು ಆ ರೀತಿ ಹೇಳಿಕೆ ಕೊಟ್ಟಿಲ್ಲ

ಎಂದರೆ ಸರಿಯಲ್ಲ.

7. ಜಗಳ ಆದ ನಂತರ ನನ್ನ ಅಜ್ಜಿ ಒಬ್ಬರೆ ಇದ್ದಾಗ ವಾದಿ ಅವರನ್ನು ನೋಡಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿ ಗೆ ಒಂದು ಬ್ಯಾಂಕನ ಪಾಸ ಬುಕ್ಕು ತೋರಿಸುತ್ತಿದ್ದು ಸಾಕ್ಷಿ ಅದರಲ್ಲಿನ ಛಾಯ ಚಿತ್ರವನ್ನು ನೋಡಿ ಅದು ತನ್ನ ಅಜ್ಜಿದ್ದು ಎಂದು ಗುರುತಿಸಿ ಸದರಿ ದಾಖಲೆಯು ತನ್ನ ಅಜ್ಜಿಯ ಬ್ಯಾಂಕ ಪಾಸ ಬುಕ್ಕು ಎಂದು ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಪಿ 8 ಎಂದು ಗುರುತಿಸಲಾಯಿತು. 2008 ರಿಂದ ವಾದಿ ನನ್ನ ಅಜ್ಜಿಯನ್ನು ನೋಡಿಕೊಂಡಿದ್ದರಿಂದ ನನ್ನ ಅಜ್ಜಿ ದಿಃ 17-12-2012 ರಂದು ತನ್ನ 1/3 ಹಿಸ್ಸೆಯನ್ನು ವಾದಿಯ ಹೆಸರಿಗೆ ಮೃತ್ಯು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

8. ಲಕ್ಷಣ ರವರೆ ದಾವ ನಂಬರ 113/08 ನು ಸಲ್ಲಿಸಲು ಪ್ರೇರೆಪಿಸಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯು ಪತ್ರ ಮಾಡಿಕೊಟ್ಟಿದ್ದರು ಸಹ ಇಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ಪ್ರತಿವಾದಿ ಪತ್ರ ಸಲ್ಲಿಸಿ ಸುಳ್ಳು ದಾಖಲೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

**ಓ.ಹೆ.ಕೆ.ಸರಿ ಇದೆ.**

**(ಅಶೋಕ ಆರ್ ಹೆಚ್)**
**1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ.**